ಅಂದು ರಾತ್ರಿ ಸುಬ್ಬಣ್ಣನ ಮನೆಯಲ್ಲಿ ಬೆಂಗಳೂರಿನ ತಾತ ಅಜ್ಜಿ, ದೊಡ್ಡಮ್ಮ, ಅಮ್ಮ, ನಾನು, ಅತ್ತಿಗೆಯ ತಾಯಿ, ಅತ್ತಿಗೆಯ ತಂಗಿ ಮಾತ್ರ ಉಳಿದೆವು. ಎಲ್ಲರ ಊಟವಾದ ಮೇಲೆ ಅವರೆಲ್ಲಾ ಹಾಲಿನಲ್ಲಿ ಟೀವಿ ಮುಂದೆ ಕುಳಿತು ಎಲೆ ಅಡಿಕೆ ಹಾಕಿಕೊಂಡು ತಮ್ಮ ಕುಟುಂಬದ ಮಾತುಕತೆಯಲ್ಲಿ ತೊಡಗಿದ್ದರು. ಸುಬ್ಬಣ್ಣ ಅಲ್ಲಿನ ತನ್ನ ಸ್ನೇಹಿತರಿಗೆ ಪಾರ್ಟಿ ಕೊಡಿಸಲೆಂದು ಹೋದವನು ಬಂದಿರಲಿಲ್ಲ. (ನನ್ನನ್ನೂ ಕರೆದಿದ್ದ. ನಾನು ಏನೂ ಕುಡಿಯುವುದಿಲ್ಲ, ಸುಮ್ಮನೆ ಕುಳಿತುಕೊಳ್ಳಬೇಕೆಂದು ಹೋಗಿರಲಿಲ್ಲ) ನಾನು ಹೊರಗೆ ಬಂದು ತಾರಸಿಗೆ ಹೋಗಲು ಇದ್ದ ಮೆಟ್ಟಲುಗಳ ಮೇಲೆ ಕುಳಿತುಕೊಂಡಿದ್ದೆ.

'ಏನ್ರೀ ಬಾವನ ತಮ್ಮಾ.. ಒಬ್ರೇ ಒಂಟಿ ಪ್ರಾಣಿ ತರಾ ಕೂತ್ಕೊಂಡು ಏನ್ ಮಾಡ್ತಿದೀರಿ..' ಎಂದು ಅಲ್ಲಿಗೆ ಬಂದ ಅತ್ತಿಗೆಯ ತಂಗಿ ಕಿಚಾಯಿಸಿದ್ದನ್ನು ಕಂಡು ನನಗೆ ಒಂದು ಕ್ಷಣ ತಬ್ಬಿಬ್ಬಾಯಿತು. ಏನು ಉತ್ತರಿಸಬೇಕೆಂದು ತಿಳಿಯದೇ ಸುಮ್ಮನೆ ಪೆಚ್ಚಾಗಿ ಮುಗುಳ್ನಗೆ ಬೀರಿದೆ.

'ಹೋಗ್ಲಿ ನಾನು ಯಾರು ಅಂತ ಗೊತ್ತಾ..' ಎಂದು ಮುಗುಳ್ನಕ್ಕಿದ್ದು ನೋಡಿ ನನಗೆ ದಿಗಿಲಾಯಿತು. ನನಗೆ ಉತ್ತರಿಸದೆ ಬೇರೆ ದಾರಿ ಇರಲಿಲ್ಲ.

'ಗೊತ್ತು. ನೀವು ಅತ್ತಿಗೆ ತಂಗಿ.. ' ಎಂದು ಮೆಲುದನಿಯಲ್ಲಿ ನುಡಿದೆ.

'ನನ್ನ ಹೆಸ್ರು ಗೊತ್ತಾ..' ಮತ್ತೊಮ್ಮೆ ಕಿಚಾಯಿಸಿದಳು. ಅವಳ ಹೆಸರು ನನಗೆ ಗೊತ್ತಿರಲಿಲ್ಲ. ಅಲ್ಲಿಗೆ ಹೋದ ಮೇಲೆ ಅತ್ತಿಗೆ ಒಂದೆರಡು ಬಾರಿ 'ಲೇ ಸೀಮಿ.. ಎಂದು ಅವಳ ಹೆಸರು ಹಿಡಿದು ಕರೆದದ್ದು ಜ್ಞಾಪಕಕ್ಕೆ ಬಂದು 'ಗೊತ್ತು.. ನಿಮ್ಮೆಸ್ರು ಸೀಮಿ' ಎಂದೆ.

'ಅಯ್ಯೋ ದೇವ್ರೆ.. ನನ್ನ ಹೆಸ್ರು ಸೀಮಿ ಅಲ್ಲಾರಿ.. ಸೀಮಾ ಅಂತ.' ಎಂದು ನಕ್ಕಳು. ನಾನೂ ಮುಗುಳ್ನಕ್ಕೆ.

'ನನ್ನನ್ನ ಇದಕ್ಕಿಂತ ಮುಂಚೆ ಎಲ್ಲಾದ್ರೂ ನೋಡಿದ್ರಾ..?' ಎಂದು ತನ್ನ ಕಣ್ಣುಗಳನ್ನಗಲಿಸಿ ಕೇಳಿದಳು. ನನಗೆ ಗಲಿಬಿಲಿಯಾಯಿತು. ಅವಳನ್ನು ನೋಡಿದ್ದು ನಾನು ಇದೇ ಮೊದಲ ಬಾರಿ. ಹೈದರಾಬಾದಿಗೆ ಬಂದ ಮೇಲೆಯೇ.

'ನೀವು ನೋಡಿಲ್ಲ ಅನ್ಸುತ್ತೆ.. ಆದ್ರೆ ನಾನು ನಿಮ್ಮನ್ನ ನೋಡಿದ್ದೆ..' ಎಂದಳು. ನನಗೆ ಇನ್ನಷ್ಟು ಗಲಿಬಿಲಿಯಾಯಿತು.

'ನೀವು ಅಕ್ಕನ ಮದ್ವೆಗೆ ಬೆಂಗಳೂರಿಗೆ ಬಂದಿದ್ರಲ್ಲಾ ನಿಮ್ಮ ಅಮ್ಮನ ಜೊತೆ.. ಆವಾಗ ನೋಡಿದ್ದೆ. ಆವಾಗ ನಾನು ಒಂಬತ್ತನೇ ಕ್ಲಾಸಿನಲ್ಲಿದ್ದೆ. ನಿಮ್ಮನ್ನ ನೋಡಿ ಇದ್ಯಾವುದೋ ಫಾರಿನ್ ಕೋತಿ ಬಂದಿದೆಯಲ್ಲಾ.. ಅಂದುಕೊಂಡೆ. ಆಮೇಲೆ ಅಕ್ಕನನ್ನ ವಿಚಾರಿಸಿಕೊಂಡಿದ್ದೆ. ಅದು ಇಂಡಿಯಾದ್ದೇ ಕೋತಿ ಕಣೇ.. ನಿಮ್ಮ ಭಾವನ ತಮ್ಮ.. ಅವರ ಚಿಕ್ಕಮ್ಮನ ಮಗ ಅಂತ ಅಕ್ಕ ಹೇಳಿದ್ಲು..' ಎಂದು ಜೋರಾಗಿ ನಕ್ಕಳು. ನನಗೂ ನಗು ತಡೆಯಲಾಗಲಿಲ್ಲ. ನಾನು ಸುಬ್ಬಣ್ಣನ ಮದುವೆಯ ಸಮಯದಲ್ಲಿ ಎರಡನೇ ಪಿಯುಸಿ ಮುಗಿಸಿದ್ದೆ ಎಂದು ನನಗೆ ನೆನಪಾಯಿತು. ಅಷ್ಟರಲ್ಲಿ ಅಡುಗೆ ಮನೆಯಲ್ಲಿದ್ದ ಅತ್ತಿಗೆ ಲೇ ಸೀಮಿ ಎಲ್ಲಿದೀಯೇ.. ಪಾಪು ಎದ್ದಂಗಾಯ್ತು ನೋಡೇ ಸ್ವಲ್ಪ.. ಎಂದು ಕೂಗಿದ್ದು ಕೇಳಿ ಬಂದೆ ಒಂದು ನಿಮಿಷ.. ಎಂದು ಒಳಗೆ ಓಡಿದಳು.

ಅವಳು ಒಳಗೆ ಹೋದ ನಂತರ ನನಗೇನೋ ಒಂದು ತರಹದ ಖುಷಿಯಂತೂ ಆಗಿದ್ದುದು ನನ್ನ ಗಮನಕ್ಕೆ ಬಂದಿತ್ತು. ಯಾಕೆಂದರೆ ಅಲ್ಲಿಯವರೆಗೂ ನನ್ನ ಜೀವನದಲ್ಲಿ ಯಾವ ಹುಡುಗಿಯೂ ಅವಳಂತೆ ನನ್ನೊಡನೆ ಮಾತನಾಡಿರಲಿಲ್ಲ. ನನ್ನ ಮನಸ್ಸಿನಲ್ಲಿ ಅವಳ ರೂಪವನ್ನು ಕಲ್ಪಿಸಿಕೊಂಡೆ. ಅತ್ತಿಗೆಯಂತೆಯೇ ಎಣ್ಣೆಗೆಂಪು ಬಣ್ಣದ, ಅತ್ತಿಗೆಯಂತೆಯೇ ತುಸು ದಢೂತಿ ದೇಹ ಎನ್ನಬಹುದಾದ ಮಧ್ಯಮ ಎತ್ತರದ ಹೆಣ್ಣು ಅವಳು. ಆದರೆ ಅವಳು ಬಿಚ್ಚುಮನಸ್ಸಿನ, ನೇರ ನುಡಿಯ, ವಾಚಾಳಿ ಹುಡುಗಿ ಎನ್ನುವುದಂತೂ ನನಗೆ ದೃಢವಾಗಿತ್ತು. ಅವಳ ಮುಖದಲ್ಲಿ ಎಂತಹುದೋ ಲವಲವಿಕೆ, ಜೀವನೋತ್ಸಾಹಗಳು ತುಂಬಿ ತುಳುಕುತ್ತಿದ್ದವು. ಅವಳು ಮತ್ತೆ ಬರಬಹುದು ಎಂದು ಕಾತುರದಿಂದ ಕಾಯತೊಡಗಿದೆ. ಅಷ್ಟರಲ್ಲಿ ಸುಬ್ಬಣ್ಣ ಕಾರಿನಲ್ಲಿ ಬಂದು ಹಾರ್ನ್ ಮಾಡಿದ. ಒಳಗಿನಿಂದ ಸೀಮಾ ಗೇಟು ತೆರೆಯಲೆಂದು ಓಡೋಡಿ ಬಂದಳು. ಆದರೆ ನಾನೇ ಹೋಗಿ ಆಗಲೇ ಗೇಟು ತೆರೆದಿದ್ದೆ. ಅವಳು ನನ್ನ ಕಡೆಗೊಮ್ಮೆ ವಾರೆ ನೋಟ ಬೀರಿ ಒಳಗೆ ಹೋದಳು. ಕಾರನ್ನು ಒಳಗೆ ನಿಲ್ಲಿಸಿದ ಸುಬ್ಬಣ್ಣ ಊಟ ಆಯ್ತೇನೋ ಗಿರಿ.. ಎಂದ. ಹೂಂ.. ಎಂದು ಅವನ ಹಿಂದೆಯೇ ಮನೆಯ ಒಳಗೆ ಹೋದೆ.

ಮರುದಿನ ಬೆಳಿಗ್ಗೆಯೇ ಸುಬ್ಬಣ್ಣ ಎರಡು ಕಾರುಗಳಲ್ಲಿ ಎಲ್ಲರಿಗೂ ಮುತ್ತಿನ ನಗರವನ್ನು ತೋರಿಸಲು ಕರೆದುಕೊಂಡು ಹೋದ. ಸುಬ್ಬಣ್ಣನ ಕಾರಿನಲ್ಲಿ ಅತ್ತಿಗೆ ಅವರ ಎರಡು ಮಕ್ಕಳು, ಅವರ ತಾಯಿ, ದೊಡ್ಡಮ್ಮ ಮತ್ತು ಸೀಮಾ ಕುಳಿತಿದ್ದರು. ಬಾಡಿಗೆ ಟ್ಯಾಕ್ಸಿಯಲ್ಲಿ ನಾನು, ಅಮ್ಮ, ಬೆಂಗಳೂರಿನ ತಾತ ಅಜ್ಜಿ ಕುಳಿತಿದ್ದೆವು. ಅವತ್ತು ಸಾಲಾರ್ ಜಂಗ್ ಮ್ಯೂಸಿಯಮ್ ನೋಡುವಷ್ಟರಲ್ಲಿಯೇ ಮಧ್ಯಾಹ್ನವಾಗಿ ಹೋಯಿತು. ಅಮ್ಮ ತನ್ನ ದೈನಂದಿನ ಕೆಲಸ ಕಾರ್ಯಗಳಿಂದ ಮುಕ್ತಗೊಂಡವಳಂತೆ ಪೂರ್ತಿ ನಿರಾಳವಾಗಿದ್ದಳು. ಮ್ಯೂಸಿಯಮ್‌ನಿಂದ ಹೊರ ಬಂದ ಮೇಲೆ ಅಲ್ಲೇ ಇದ್ದ ಹೋಟೇಲೊಂದರಲ್ಲಿ ಎಲ್ಲರೂ ಊಟ ಮಾಡಿದೆವು. ಸುಬ್ಬಣ್ಣ ಎಲ್ಲರನ್ನೂ ಅಲ್ಲಿದ್ದ ಒಂದು ಮುತ್ತಿನ ಅಂಗಡಿಗೆ ಕರೆದುಕೊಂಡು ಹೋದ. ಹೆಂಗಸರೆಲ್ಲಾ ಮುತ್ತುಗಳನ್ನು ಖರೀದಿಸುವುದರಲ್ಲಿ ತಲ್ಲೀನರಾಗಿದ್ದರು. ಅವರು ಬೇಗ ವ್ಯಾಪಾರ ಮುಗಿಸುವುದಿಲ್ಲವೆಂದು ತಿಳಿಯಿತು. ನಾನು ಹೊರಗೆ ಬಂದು ನಿಂತುಕೊಂಡೆ. ಸುಬ್ಬಣ್ಣ ಅತ್ತಿಗೆ ಬೈದುಬಿಟ್ಟಾಳು ಎಂದು ಹೆದರಿ ಒಳಗೆ ಸುಮ್ಮನೆ ಕುಳಿತುಬಿಟ್ಟಿದ್ದ.

ಸೀಮಾ ಸುಬ್ಬಣ್ಣನ ಮಗಳನ್ನು ಎತ್ತಿಕೊಂಡು ನಾನು ನಿಂತಲ್ಲಿಗೆ ಬಂದು ಏನ್ರೀ ಬಾವನ ತಮ್ಮಾ.. ಹೈದರಾಬಾದಿಗೆ ಬಂದಿರೋದು ಇದೇ ಮೊದಲ ಸರ್ತಿ ಅನ್ಸುತ್ತೆ.. ನಾನಂತೂ ಬಹಳ ಸರ್ತಿ ಬಂದಿದೀನಿ.. ಸಿಟಿ ಚೆನ್ನಾಗಿದಿಯೇನ್ರೀ.. ಎಂದು ನಸುನಕ್ಕಳು.

ನನ್ನೆಸ್ರು ಬಾವನ ತಮ್ಮ ಅಲ್ಲಾ.. ಗಿರಿಧರ ಅಂತ.. ಎಂದು ನಾನೂ ನಕ್ಕೆ.


ಓಹೋ.. ನಿಮ್ಗೆ ಮಾತನಾಡೋದಿಕ್ಕೂ ಬರುತ್ತೆ ಅಂತ ಆಯ್ತು.. ಅಕ್ಕ ನೋಡಿದ್ರೆ ಅವನು ಮಾತೇ ಆಡಲ್ಲಾ ಕಣೇ ಅಂತಿದ್ಲು.. ಎಂದು ಹಾಸ್ಯಮಿಶ್ರಿತ ದನಿಯಲ್ಲಿ ನುಡಿದಳು. ಮುಗುಳ್ನಗೆಯೇ ನನ್ನ ಉತ್ತರವಾಯಿತು.

ಅದೇನೋ ಲವ್ ಫೈಲ್ಯೂರ್ ಅಂತೆ.. ಒಳ್ಳೇ ಹಾಲಿವುಡ್ ಹೀರೋ ತರಾ ಇದೀರಿ.. ನಿಮಗೆಂತ ಲವ್ ಫೈಲ್ಯೂರಪ್ಪಾ.. ಎಂದು ಕಣ್ಣಗಳಲ್ಲಿ ಅಚ್ಚರಿ ವ್ಯಕ್ತಪಡಿಸಿದಳು. ಅಲ್ಲಿಗೆ ಅವಳು ನನ್ನ ಬಗ್ಗೆ ಎಲ್ಲವನ್ನೂ ತಿಳಿದುಕೊಂಡಿದ್ದಾಳೆ ಎಂದು ನನಗೆ ಖಚಿತವಾಯಿತು. ಪೂರ್ಣ ಪಾರದರ್ಶಕ ಮನಸ್ಸಿನ ಅವಳ ಬಳಿ ಏನನ್ನೂ ಮುಚ್ಚಿಡುವುದರಲ್ಲಿ ಅರ್ಥವಿಲ್ಲವೆನಿಸಿ ಹೂಂ.. ಅದೊಂತರ ಒನ್ ವೇ ಲವ್.. ಅದಕ್ಕೇ ಫೈಲ್ಯೂರ್ ಆಯ್ತು.. ಎಂದೆ.

ಅಯ್ಯೋ ಎಲ್ಲಾರದ್ದು ಒಂದು ಲವ್ ಫೈಲ್ಯೂರ್ ಇದ್ದೇ ಇರುತ್ತೆ ಬಿಡಿ.. ಅದೇನು ಮಹಾ.. ನನ್ನ ವಿಷ್ಯ ಗೊತ್ತಾ.. ನಾನು ಪಿಯೂಸಿಯಲ್ಲಿದ್ದಾಗ ನಾವು ಮೂವರು ಹುಡುಗೀರು ಕ್ಲೋಸ್ ಫ್ರೆಂಡ್ಸ್, ಒಬ್ಬ ಹುಡುಗನ್ನೇ ಲವ್ ಮಾಡ್ತಿದ್ವಿ.. ನಮಗೆ ಅದು ಗೊತ್ತೇ ಇರ್ಲಿಲ್ಲ.. ಆ ಕೋತಿ ನಮ್ಮನ್ನ ಯಾರನ್ನೂ

## ನವಿಲು!

ನವಿಲು
ಮೊಟ್ಟೆಯಿಡುವುದು
ಸತ್ಯ!
ನವಿಲು
ಮರಿ ಹಾಕಿದರೆ
ಕವಿತೆ!
ನವಿಲು
ಕಣ್ಣೀರು ಕುಡಿದು
ಸಂತಾನೋತ್ಪತ್ತಿ
ಮಾಡಿದರೆ
ಅದು
ಜಡ್ಜ್‌ಮೆಂಟ್!



★ ಪಿ.ಜೆ. ರಾಘವೇಂದ್ರ ಮೈಸೂರು